# 2021ಕ್ಕೆ ಜಿಯೊ ಸ್ವದೇಶಿ 5ಜಿ

■ ಶಶಿಕುಮಾರ್ ಸಿ.




ಭಾರತೀಯ ಇಂಟರ್ನೆಟ್ ಲೋಕದಲ್ಲಿ ಅತ್ಯಾಕರ್ಷಕ ಕೊಡುಗೆಗಳನ್ನು ನೀಡುತ್ತಲೇ ಮುನ್ನೆಲೆಗೆ ಬಂದಿರುವ ರಿಲಯನ್ಸ್, ದೇಶದ ಟೆಲಿಕಾಂ ವಲಯದಲ್ಲಿ ಮತ್ತೆ ಸಂಚಲನ ಮೂಡಿಸುವ ಸೂಚನೆಯನ್ನು ನೀಡಿದೆ.

ಈಚೆಗಷ್ಟೇ ಸಂಸ್ಥೆಯ 43ನೇ ವಾರ್ಷಿಕ ಸಭೆಯಲ್ಲಿ ಮಾತನಾಡಿರುವ ಕಂಪನಿಯ ಮುಖ್ಯಸ್ಥ ಮುಖೇಶ್ ಅಂಬಾನಿ, '2021ರ ವೇಳೆಗೆ ಗೂಗಲ್ ಜೊತೆಗೂಡಿ ಸ್ವದೇಶಿ ನಿರ್ಮಿತ 5ಜಿ ತಂತ್ರಜ್ಞಾನವನ್ನು ಪರಿಚಯಿಸಲಿದ್ದೇವೆ' ಎಂದು ಘೋಷಿಸಿದ್ದಾರೆ. ದೇಶದಲ್ಲಿ ಸದ್ಯದ ಮಟ್ಟಿಗೆ ಲಭ್ಯವಿರುವ ತಂತ್ರಜ್ಞಾನ ಮತ್ತು ಅವಕಾಶಗಳನ್ನು ಬಳಸಿಕೊಳ್ಳುವ ಉದ್ದೇಶ ರಿಲಯನ್ಸ್‌ದ್ದಾಗಿದೆ.

ರಿಲಯನ್ಸ್‌ನಲ್ಲಿ ಗೂಗಲ್ ಬರೋಬ್ಬರಿ 33 ಸಾವಿರ ಕೋಟಿ ರೂಪಾಯಿ ಬಂಡವಾಳ ಹೂಡುವುದಾಗಿ ಈಚೆಗಷ್ಟೇ ಗೂಗಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುಂದರಂ ಪಿಚ್ಚೈ ಘೋಷಿಸಿದ್ದಾರೆ. ಸದ್ಯ ಆ ಪ್ರಕ್ರಿಯೆ ಜಾರಿಯಲ್ಲಿದ್ದು, ಅದು ಸಾಧ್ಯವಾದರೆ ರಿಲಯನ್ಸ್‌ನಲ್ಲಿ ಗೂಗಲ್‌ನ ಪಾಲುದಾರಿಕೆ ಶೇಕಡ 7.7ರಷ್ಟು ಆಗಲಿದೆ. ಇದರಿಂದಾಗಿಯೇ ಎರಡೂ ಕಂಪನಿಗಳು ಜೊತೆಗೂಡಿ 5 ಜಿ ತಂತ್ರಜ್ಞಾನ ಪರಿಚಯಿಸುವತ್ತ ಮುಂದಾಗಿವೆ.

ಭಾರತದಲ್ಲಿ 5 ಜಿ ನೆಟ್ವರ್ಕ್ ಬೆಂಬಲಿತ ಸ್ಮಾರ್ಟ್ ಫೋನ್ ಬಿಡುಗಡೆ ಮಾಡುವುದಾಗಿಯೂ ಮುಖೇಶ್ ಅಂಬಾನಿ ಹೇಳಿದ್ದು, ಅವರ ಕಂಪನಿಯು ಈಗಾಗಲೇ ಸಿದ್ಧಪಡಿಸಿರುವ ಜಿಯೊ ದೇಶಿಯ 5G ಟೆಲಿಕಾಂ ಸೊಲ್ಯೂಷನ್ ಅನ್ನು 5G ಸ್ಪೆಕ್ಟ್ರಮ್ ಲಭ್ಯವಾದ ಕೂಡಲೇ ಪರೀಕ್ಷೆಗೆ ಸಿದ್ಧಪಡಿಸಲಾಗುತ್ತದೆ ಎಂದಿದ್ದಾರೆ.

ಗೂಗಲ್ ಮತ್ತು ಜಿಯೊ ಎರಡೂ ಸೇರಿ 2021ರ ವೇಳೆಗೆ ಅಗ್ಗದ ದರದ 5G ಸ್ಮಾರ್ಟ್‌ಫೋನ್‌ಗಳನ್ನು ತಯಾರಿಸಲಿವೆ. ಇಲ್ಲಿವರೆಗೂ ಜಿಯೊ 100 ಮಿಲಿಯನ್ ಜಿಯೊ ಫೋನ್‌ಗಳನ್ನು ಮಾರಾಟ ಮಾಡಿದ್ದು, ಸಾಮಾನ್ಯ ಜನರ ಮೊಬೈಲ್ ಅನ್ನು ಸ್ಮಾರ್ಟ್‌ಫೋನ್‌ಗೆ ಅಪ್‌ಗ್ರೇಡ್ ಮಾಡಲು ಮುಂದಾಗಿದೆ. ಇದೇ ಕಾರಣಕ್ಕೆ ಪ್ರಾರಂಭಿಕ ಬೆಲೆಯಲ್ಲಿಯೇ 4G ಅಥವಾ 5G ಸ್ಮಾರ್ಟ್‌ಫೋನ್‌ಗಳನ್ನು ಬಿಡುಗಡೆ ಮಾಡಲಿದ್ದು, ಅದಕ್ಕೆ ಬೇಕಾದಂತಹ ಆ್ಯಂಡ್ರಾಯ್ಡ್ ಆಧಾರಿತ ಸ್ಮಾರ್ಟ್‌ಫೋನ್ ಆಪರೇಟಿಂಗ್ ಸಿಸ್ಟಂ ತಯಾರಿಸುವ ಸಲುವಾಗಿ ಗೂಗಲ್‌ನೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎನ್ನಲಾಗಿದೆ.

ರಿಲಯನ್ಸ್‌ನ ನಡೆ ಪ್ರಧಾನಿ ನರೇಂದ್ರ ಮೋದಿಯವರ 'ಆತ್ಮನಿರ್ಭಾರ ಭಾರತ್' ಅಭಿಯಾನಕ್ಕೆ ಅನುಗುಣವಾಗಿದೆ ಎಂದಿರುವ ಮುಖೇಶ್ ಅಂಬಾನಿ, 'ಜಿಯೊ 5G ಸಲ್ಯೂಷನ್ ಅನ್ನು ಭಾರತದಲ್ಲಿ ಮೊದಲಿನಿಂದ ತಯಾರಿಸಲಾಗಿದ್ದು, ಇದು ಜಿಯೋ ಭಾರತದಲ್ಲಿ ವಿಶ್ವ ದರ್ಜೆಯ 5G ಸೇವೆಯನ್ನು ಪ್ರಾರಂಭಿಸಲು ಅನುವು ಮಾಡಿಕೊಡಲಿದೆ. ಜಿಯೋ 5G ಸಲ್ಯೂಶನ್ ಅನ್ನು ಜಾಗತಿಕವಾಗಿ ಇತರ ಟೆಲಿಕಾಂ ಆಪರೇಟರ್‌ಗಳಿಗೆ ರಫ್ತು ಮಾಡಲು ಕಂಪನಿಯು ಯೋಜಿಸಿದೆ' ಎಂದಿದ್ದಾರೆ. ■

# ದೇಸಿ ಟ್ಯಾಗ್‌ನ 'ಎಲಿಮೆಂಟ್ಸ್'

ಚೀನಾ ಮೂಲದ 59 ಆ್ಯಪ್‌ಗಳಿಗೆ ಕೇಂದ್ರ ಸರ್ಕಾರ ನಿಷೇಧ ಹೇರಿದ ಬೆನ್ನಲ್ಲೇ ಸ್ವದೇಶಿ ಆ್ಯಪ್‌ಗಳಿಗೆ ದೇಶದಲ್ಲಿ ಬೇಡಿಕೆ ಹೆಚ್ಚಿದೆ. ಈ ಬೇಡಿಕೆಗೆ ಅನುಸಾರವಾಗಿ ಹಲವಾರು ದೇಸಿ ಆ್ಯಪ್‌ಗಳು ರೂಪುಗೊಳ್ಳುತ್ತಿದ್ದು, ಅವುಗಳಿಗೆ ಬೇಡಿಕೆ ಹೆಚ್ಚತೊಡಗಿದೆ. ಹಾಗೆ ಬೇಡಿಕೊಂಡಿರುವ 'ಎಲಿಮೆಂಟ್ಸ್' ಎಂಬ ಆ್ಯಪ್ ದೇಸಿ ಸಾಮಾಜಿಕ ಜಾಲತಾಣದ ರೂಪದಲ್ಲಿ ಸುದ್ದಿಯಲ್ಲಿದೆ.

'ಎಲಿಮೆಂಟ್ಸ್' ಆ್ಯಪ್ ಬಿಡುಗಡೆ ಮಾಡಿರುವ ಉಪರಾಷ್ಟ್ರಪತಿ ಎಂ. ವೆಂಕಯ್ಯ ನಾಯ್ಡು, ಹೊಸ ಆ್ಯಪ್ ಬಗ್ಗೆ ತಮ್ಮ ಟ್ವಿಟರ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. 'ಆರ್ಟ್ ಆಫ್ ಲಿವಿಂಗ್‌ನ ಸ್ವಯಂ ಸೇವಕರಾಗಿರುವ ಸಾವಿರಕ್ಕೂ ಅಧಿಕ ಮಾಹಿತಿ ತಂತ್ರಜ್ಞರು ಜೊತೆಗೂಡಿ 'ಸುಮೇರು ಸಾಫ್ಟ್‌ವೇರ್ ಸಲ್ಯೂಷನ್ಸ್' ಕಂಪನಿ ಮೂಲಕ ರೂಪಿಸಿರುವ ಆ್ಯಪ್ ಇದಾಗಿದೆ. ದೇಶದ ಪ್ರಮುಖ ಎಂಟು ಭಾಷೆಗಳಲ್ಲಿ ಈ ಆ್ಯಪ್ ಲಭ್ಯವಿದೆ' ಎಂದು ವೆಂಕಯ್ಯ ನಾಯ್ಡು ಅವರು ಮಾಹಿತಿ ಹಂಚಿಕೊಂಡಿದ್ದಾರೆ.

ಏನಿದು ಎಲಿಮೆಂಟ್ಸ್?: ಇದು ವಾಟ್ಸ್ಆ್ಯಪ್, ಫೇಸ್‌ಬುಕ್, ಇನ್‌ಸ್ಟಾಗ್ರಾಂ ಮಾದರಿಯ ಸಾಮಾಜಿಕ ಜಾಲತಾಣ. ಆನ್‌ಲೈನ್ ಮೂಲಕ ನಗದು ವರ್ಗಾವಣೆ ಮತ್ತು ಸರಕು ಮಾರಾಟಕ್ಕೂ ನೆರವಾಗಲಿದೆ. ವಿಷಯ–ವಿಚಾರ, ವಿಡಿಯೊ ಮತ್ತು ಫೋಟೊವನ್ನು ಪೋಸ್ಟ್ ಮಾಡುವುದು, ವಿಡಿಯೊ ರೂಪಿಸುವುದು, ಫ್ರೆಂಡ್ ಲಿಸ್ಟ್ ಸೇರಿದಂತೆ ಹಲವು ಫೀಚರ್‌ಗಳನ್ನು ಇದು ಒಂದೇ ವೇದಿಕೆಯಡಿ ನೀಡುತ್ತದೆ. ದೇಸಿ ಆ್ಯಪ್‌ಗಳ ಬಳಕೆಗೆ ಉತ್ತೇಜನ ನೀಡುವುದರೊಂದಿಗೆ, ವಿವಿಧ ವಸ್ತುಗಳ ಮಾರಾಟಕ್ಕೂ ಅವಕಾಶ ಕಲ್ಪಿಸುತ್ತದೆ.

ಬಿಡುಗಡೆಯಾದ ಕೆಲವೇ ಗಂಟೆಗಳಲ್ಲಿ ಗೂಗಲ್ ಪ್ಲೇ ಸ್ಟೋರ್ ಮತ್ತು ಆ್ಯಪಲ್ ಆ್ಯಪ್ ಸ್ಟೋರ್‌ನಲ್ಲಿ ಈ ಆ್ಯಪ್ ಅನ್ನು 2 ಲಕ್ಷಕ್ಕೂ ಅಧಿಕ ಜನರು ಡೌನ್‌ಲೋಡ್ ಮಾಡಿಕೊಂಡಿದ್ದಾರೆ. ■

ಸರ್ವೇಜನಃ ಸುಖಿನೋ ಭವಂತುಃ
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ:
ಶ್ರೀ ಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.